ಈ) ವಿಷಯ: ಶಿರಾ ತಾಲ್ಲೂಕಿನಲ್ಲಿ OAP, PHP, ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆಗಳು ಕಳೆದೊಂದು ವರ್ಷದಿಂದ ಸ್ಥಗಿತಗೊಂಡಿರುವ ಬಗ್ಗೆ.

ಶ್ರೀ ಟಿ. ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, ಶಿರಾ ತಾಲ್ಲೂಕಿನಲ್ಲಿ OAP, PHP, ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆಗಳು ಕಳೆದ ಒಂದು ವರ್ಷದಿಂದ ಸ್ಥಗಿತಗೊಂಡಿರುವ ಬಗ್ಗೆ ಹಾಗೂ ರಾಜ್ಯದಲ್ಲಿ ವಿಕಲಚೇತನ ಹಿತದೃಷ್ಟಿಯಿಂದ ಮರು ಪರಿಶೀಲಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಡಿ. ವಿ. ಸದಾನಂದಗೌಡ: (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಶಿರಾ ತಾಲ್ಲೂಕಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಾದ ಸಂಧ್ಯಾ ಸುರಕ್ಷಾ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ನಿರ್ಗತಿಕ ವಿಧವಾ ವೇತನ ಹಾಗೂ ಅಂಗವಿಕಲ ವೇತನಗಳನ್ನು ಸ್ಥಗಿತಗೊಳಿಸಿರುವುದಿಲ್ಲ. ಸದರಿ ಸೌಲಭ್ಯ ಪಡೆಯುತ್ತಿರುವ ಹಾಲಿ ಫಲಾನುಭವಿಗಳ ಒಟ್ಟು ಸಂಖ್ಯೆ 16,140 (ಸಂಧ್ಯಾ ಸುರಕ್ಷಾ–7456, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ–1464, ನಿರ್ಗತಿಕ ವಿಧವಾ ವೇತನ–3578 ಹಾಗೂ ಅಂಗವಿಕಲ ವೇತನ–3642) ಹಾಲಿ ಇರುವ ಫಲಾನುಭವಿಗಳಿಗೆ ನವೆಂಬರ್ ಮಾಹೆಯ ಪಿಂಚಣಿಯನ್ನು ವಿತರಿಸಲಾಗಿರುತ್ತದೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪಿಸುವ ಈ ಪ್ರಶ್ನೆಯನ್ನು ಸನ್ಮಾನ್ಯ ಯಡಿಯೂರಪ್ಪನವರೂ ಸಹಾ ಕೇಳಿಸಿಕೊಳ್ಳಬೇಕು. ನಮ್ಮ ತಾಲ್ಲೂಕಿನಲ್ಲಿ OAP, PHP, ವಿಧವಾ ವೇತನ ಇತ್ಯಾದಿ ಪಡೆಯುತ್ತಿದ್ದವರು ಎಷ್ಟು ಎಂಬುದನ್ನು ನಾನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ಉತ್ತರದಲ್ಲಿ ನಿರ್ದಿಷ್ಟವಾಗಿ ಅದು ಎಷ್ಟು ಎಂದು ನನಗೆ ಅರ್ಥವಾಗಲಿಲ್ಲ. ನಮ್ಮ ತಾಲ್ಲೂಕಿನಲ್ಲಿ 20,488 ಜನ OAP, PHP, ವಿಧವಾ ವೇತನ, ಇತ್ಯಾದಿ ಪಡೆಯುತ್ತಿದ್ದರು. ಅದರಲ್ಲಿ 4,358 ಜನರದ್ದು ಶಿರಾ ತಾಲ್ಲೂಕೊಂದರಲ್ಲೇ ವಜಾ ಆಗಿದೆ. ಯಾವ ಕಾರಣಕ್ಕಾಗಿ ವಜಾ ಆಗಿದೆ ಎಂಬ ಬಗ್ಗೆ ತಿಳಿದುಕೊಳ್ಳಲು ನಾನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಸಭೆಯನ್ನು ನಡೆಸಿದೆ income ಅನ್ನು review ಮಾಡಬೇಕೆಂದು ಸರ್ಕಾರದ ಆದೇಶವೊಂದರಲ್ಲಿ ತಿಳಿಸಲಾಯಿತು. ಸರ್ಕಾರದ ಆದೇಶ issue ಆದ ಮೇಲೆ, ಅಂಗನವಾಡಿ workeres, village Accountants ಅವರೆಲ್ಲರೂ ಸೇರಿ ಮಾಹಿತಿಯನ್ನು ಸಂಗ್ರಹಿಸಿ ಕೊಟ್ಟರು. ಅವರು ಆ ಮಾಹಿತಿಯನ್ನು ಕೊಟ್ಟ ಮೇಲೆ, 4,358 ಜನರದ್ದು ನನ್ನ ಒಂದೇ ಕ್ಷೇತ್ರದಲ್ಲಿ ವಜಾ ಮಾಡತಕ್ಕಂಥ ಕೆಲಸ ಮಾಡಲಾಯಿತು. ದಿನಾಂಕ 11–02–2011 ರಂದು ಹೊರಡಿಸಿದ ಸರ್ಕಾರದ ಆದೇಶ ಏನಿದೆ ಎಂಬುದನ್ನು

ನಾನು ಓದಿ ಹೇಳಿಬಿಡುತ್ತೇನೆ. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ನಿರ್ಗತಿಕ ವಿಧವಾ ವೇತನ, ಅಂಗವಿಕಲ ವೇತನ, ಸಂಧ್ಯಾ ಸುರಕ್ಷಾ ಯೋಜನೆಗಳಲ್ಲಿ 2006–07ರ ಸಾಲಿಗೆ 1,64,820 ಫಲಾನುಭವಿಗಳಿದ್ದು, 2010–11ಕ್ಕೆ ಅದು 3,97,521 ಆಗಿದೆ' ಅಂದರೆ ಅದು almost double ಆಗಿದೆ ಎನ್ನುವ ಕಾರಣಕ್ಕೋಸ್ಕರ ಅದನ್ನು ಮರು ಪರಿಶೀಲನೆ ಮಾಡಬೇಕು. examine ಮಾಡಬೇಕೆಂದು ಹೇಳಲಾಯಿತು. ನಾಲ್ಕು ಸಾವಿರ ಜನರದ್ದು ವಜಾ ಆಗಿದೆಯಲ್ಲಾ, ಅದಕ್ಕೆ ಕಾರಣವೇನು? ಎಂದು ನಾನು ಅವರನ್ನು ಕೇಳಿದೆ. ಕುಂಟರು ಕುರುಡರು ಬಂದು ನಮ್ಮ ಬಳಿ ಕುಳಿತುಕೊಂಡಿರುವುದು ನೋಡಿದರೆ, ನಮಗೆ ಬಹಳ ಹೊಟ್ಟೆ ಉರಿದು ಹೋಗುತ್ತದೆ. ಆಗ ಅವರು ಕಾರಣ ಹೇಳಿದರು. ನಾನು ಅವರನ್ನು ಕರೆದು ನೀವು ಯಾವ income ಆಧಾರದ ಮೇಲೆ ಇದನ್ನು ಮಾಡಿದ್ದೀರಿ? ಎಂದು ಕೇಳಿದೆ. ನಾನು ಸತ್ಯ ಹೇಳುತ್ತೇನೆ. Old-age pension ನವರಿಗೆ 6 ಸಾವಿರ ರೂ.ಗಳು, Physically handicapped ನವರಿಗೆ 6 ಸಾವಿರ ರೂ.ಗಳು ಅಂಗವಿಕಲರಿಗೆ 6 ಸಾವಿರ ರೂ.ಗಳು ಮತ್ತು ಸಂಧ್ಯಾ ಸುರಕ್ಷಾದವರಿಗೆ 20 ಸಾವಿರ ರೂ.ಗಳ income limit ಇದೆ ಎಂದು ಅವರು ನನಗೆ ಹೇಳಿದರು. ಇದನ್ನೆಲ್ಲಾ ಕೇಳಿದ ಮೇಲೆ, ನಾನು Deputy Commissioner ಅವರ ಕಛೇರಿಗೆ ಹೋಗಿ ಹುಡುಕಿದ ಮೇಲೆ, ನನಗೊಂದು ಸರ್ಕಾರದ ಆದೇಶ ಸಿಕ್ಕಿತು. ಅದರಲ್ಲಿ Old age pension ಪಡೆಯವವರಿಗೂ ಕೂಡ 2008–09ನೇ ಸಾಲಿನ income limit ಅನ್ನು 11,000/– ರೂ.ಗಳಿಗೆ ಜಾಸ್ತಿ ಮಾಡಲಾಗಿದೆ ಎಂದು ಇತ್ತು. ಈ ರೀತಿ income limit ಅನ್ನು 11,000/–ರೂ.ಗಳಿಗೆ ಏರಿಕೆ ಮಾಡಿದ್ದರೂ ಸಹ ಅಧಿಕಾರಿಗಳು 6 ಸಾವಿರ ರೂ.ಗಳ income limit ಅನ್ನು ಆಧಾರವಾಗಿಟ್ಟುಕೊಂಡು verify ಮಾಡಿ, ಕೆಲವರದನ್ನು ವಜಾ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ನಾನು ಶಿಕಾರಿಪುರಕ್ಕೆ ಹೋಗಿದ್ದೆ. ಶಿಕಾರಿಪುರಕ್ಕೆ ಹೋಗಿ ನಂತರ ನಾನು ಹಾಗೆಯೇ ಇಲ್ಲೆಲ್ಲಾ ಏನಾಗಿರಬಹುದು ಎಂದು ತಿಳಿದುಕೊಳ್ಳಲು ಹಿರೇಕೆರೂರಿಗೆ ಹೋಗಿದ್ದೆ. ಅಲ್ಲಿ ಬಹಳ ಜನರು ಸೇರಿ meeting ವೊಂದನ್ನು ನಡೆಸುತ್ತಿದ್ದರು. ಮಾನ್ಯ ಯಡಿಯೂರಪ್ಪನವರೆ, ಇದಕ್ಕಾಗಿಯೇ ತಾವು ಇದನ್ನು ಕೇಳಿಸಿಕೊಳ್ಳಬೇಕೆಂದು ನಾನು ಹೇಳಿದ್ದು. ಸಂಧ್ಯಾ ಸುರಕ್ಷಾ ಯೋಜನೆಯನ್ನು ತಾವು ವಚನ ಕೊಟ್ಟು ಜಾರಿಗೆ ತಂದಿದ್ದೀರಿ. 65 ವರ್ಷ ವಯಸ್ಸಾಗಿರುವ Senior Citizens ಯಾರಿದ್ದಾರೋ, ಅವರಿಗೆ ಮುಂದಾಲೋಚನೆಯಿಂದ ತಿಂಗಳಿಗೆ 400/– ರೂ.ಗಳ ವೇತನ ಕೊಡಬೇಕೆಂಬ ತೀರ್ಮಾನದಂತೆ ತಾವು ಈ ಯೋಜನೆ ಜಾರಿಗೊಳಿಸಿದಿರಿ. ಆದರೆ ಈಗ ಏನಾಗಿದೆ ಎಂದರೆ, ಈ ರೀತಿ ಸಮೀಕ್ಷೆ ಮಾಡಿದ್ದರಿಂದ

ಅಂತಹ ಲಕ್ಷಾಂತರ ಜನರದ್ದು ವಜಾ ಆಯಿತು. ಈಗ ಒಂದು ಅಪಕೀರ್ತಿ ಬಂದಿದೆ. ಮಾನ್ಯ ಯಡಿಯೂರಪ್ಪನವರು ಅಧಿಕಾರದಲ್ಲಿದ್ದಾಗ ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ನಮಗೆ ದುಡ್ಡು ಬರುತ್ತಿತ್ತು. ಆದರೆ ಮಾನ್ಯ ಸದಾನಂದಗೌಡರು ಅಧಿಕಾರಕ್ಕೆ ಬಂದ ಮೇಲೆ ಅದು ನಿಂತು ಹೋಯಿತು ಎನ್ನುವಂತಹ ಅಪವಾದ ನಿಮ್ಮ ಮೇಲೆ ಬರುತ್ತಿದೆ. ನಾನು ನಿಮ್ಮ ನಡುವೆ ಜಗಳ ತಂದಿಡಬೇಕೆಂಬ ಉದ್ದೇಶದಿಂದ ಈ ಮಾತನ್ನು ಹೇಳುತ್ತಿಲ್ಲ. ನೀವು ಅವರಷ್ಟೇ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆನ್ನುವ ಭಾವನೆ ನನ್ನದಾಗಿದೆ. ಅದಕ್ಕೋಸ್ಕರ ಒಂದೇ ಒಂದು ಮಾತನ್ನು ಹೇಳುತ್ತೇನೆ. ಹಿರೇಕೆರೂರಿನಲ್ಲಿ ಕಾಗದವೊಂದನ್ನು ನಾನು ನೋಡಿದೆ.

ಅಧ್ಯಕ್ಷರು: ದಯವಿಟ್ಟು clarification ಕೇಳಿ

ಶ್ರೀ ಟಿ. ಬಿ. ಜಯಚಂದ್ರ: ಅದರಲ್ಲಿ ಈ ರೀತಿ ಇತ್ತು. 'ಪತ್ರದಲ್ಲಿ ಮಾಹಿತಿಯನ್ನು ಲಗತ್ತಿಸಲಾಗಿದೆ. ಹಿರೇಕೆರೂರು ಕ್ಷೇತ್ರದಲ್ಲಿ 7,990 ರದ್ದುಪಡಿಸಿದ್ದು. ಇದರ ಪೈಕಿ ಪುನಃ ಪರಿಶೀಲನೆ ಮಾಡಿದಾಗ ಜೀವಂತ ಇರುತ್ತಾರೆ' ಎಂದು ಅದರಲ್ಲಿದೆ. ಅಂದರೆ ಬದುಕಿರುವವರನ್ನೂ ಸಹ ಇವರು ಸಾಯಿಸಿದ್ದರು. ಆ ಮೇಲೆ ಪುನಃ ಇವರು ಬದುಕಿದ್ದಾರೆಂದು certify ಮಾಡಿದರು.

ಶ್ರೀ ಬಿ. ಸಿ. ಪಾಟೀಲ್: ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಕರೆಕ್ಟಾಗಿ ನಾನು ಮಾಹಿತಿ ಹೇಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ: ನಂತರ ಹೇಳುವಿರಂತೆ. ಇದೊಂದು ಸಂದರ್ಭ ಬಂದಿದ್ದರಿಂದ ಇದನ್ನು ನಾನು ಹೇಳುತ್ತಿದ್ದೇನೆ. ನೀವು ಇವತ್ತು ಲಕ್ಷ ಕೋಟಿ ರೂ.ಗಳ ಬಜೆಟ್ ಅನ್ನು ಮಂಡಿಸುವ ಮಾತುಗಳನ್ನಾಡುತ್ತಿದ್ದೀರಿ. ಉದಾರವಾಗಿ ನೀವೇ ಕೊಟ್ಟಂತಹ ಸಂಧ್ಯಾ ಸುರಕ್ಷಾ ಯೋಜನೆ Old age pension ಇತ್ಯಾದಿ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಕಡಿಮೆ ಮಾಡುತ್ತೇನೆ ಎನ್ನುವುದು ಸರಿಯಲ್ಲ. ನೀವು ಅವರಿಗೆ ಕೊಡುತ್ತಿರುವ ಹಣವನ್ನು 400/- ರೂ.ಗಳಿಂದ 600–700/–ರೂ.ಗಳಿಗೆ ಏರಿಕೆ ಮಾಡಬೇಕಾಗಿತ್ತು. ಅವರು ಕೇವಲ ಸಮಾಜಕ್ಕಲ್ಲ, ಮನೆಗೆ ಮತ್ತು ತಂದೆ–ತಾಯಿಗಳಿಗೆ, ಎಲ್ಲರಿಗೂ ಹೊರೆಯಾಗಿದ್ದಾರೆ.. ಪ್ರಕೃತಿಯ ಶಾಪಕ್ಕೆ ಈಡಾಗಿರುವವರ ರಕ್ಷಣೆಗೆ ಇವತ್ತು ಈ ಸರ್ಕಾರ ಬರುವುದಿಲ್ಲ ಎನ್ನುವುದಾದರೆ, ನನಗೆ ಆ ಬಗ್ಗೆ ನಿಜವಾಗಿಯೂ ಕೂಡ ಆಶ್ಚರ್ಯವಾಗುತ್ತದೆ. ನೀವು ಅತ್ಯಂತ ಪ್ರಾಮಾಣಿಕತೆಯಿಂದ ಇದನ್ನು ಮರು ಪರಿಶೀಲನೆ ಮಾಡಿ, ಮತ್ತೆ ಅವರಿಗೆ

ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಸರ್ಕಾರದ ಅಧಿಕಾರಿಗಳಿಂದ ಇಲ್ಲಿ ತಪ್ಪಾಗಿದೆ. 6,000/–ರೂ.ಗಳ income limit ಇಟ್ಟುಕೊಂಡು ಮಾಡಿರುವುದರಿಂದ ಇಲ್ಲಿ ತೊಂದರೆಯಾಗಿದೆ. ಆ income arise ಮಾಡಿರತಕ್ಕಂಥ ಆದೇಶ ಇವತ್ತು ನನ್ನ ಕೈಯಲ್ಲಿದೆ 11,000/– ರೂ.ಗಳ ಆದಾಯ ಮಿತಿಯನ್ನು ಗಮನದಲ್ಲಿಟ್ಟುಕೊಂಡು ನೀವು ಲೆಕ್ಕ ಹಾಕಿದರೆ ನಿಜವಾಗಿಯೂ ಕೂಡ ಎಲ್ಲರಿಗೂ ವೇತನವನ್ನು ಕೊಡಬೇಕಾಗುತ್ತದೆ. ಕೊನೆಯದಾಗಿ, ನಾನು ಒಂದು ಮಾತನ್ನು ಹೇಳುತ್ತೇನೆ. ಈ ರೀತಿಯಾಗಿ 6,000/– 11,000/– ಮತ್ತು 20,000/– ರೂ.ಗಳ ಆದಾಯ ಮಿತಿಯನ್ನು ಹಾಕುವುದು ಸರಿಯಲ್ಲ. ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ 20,000/– ರೂ.ಗಳ income limit ಇಟ್ಟಿರುವುದು ಸರಿ. ಅದನ್ನು ದೂರದೃಷ್ಟಿಯನ್ನಿಟ್ಟುಕೊಂಡು ಮಾನ್ಯ ಯಡಿಯೂರಪ್ಪನವರು ಮಾಡಿದ್ದಾರೆ. ಆದರೆ ಈಗ ಇತರ ಯೋಜನೆಗಳಲ್ಲಿ 11,000/–ರೂ.ಗಳ ಆದಾಯ ಮಿತಿ ಇದೆ. Physically handicapped ಆಗಿರುವವರು ಜೀವನಪರ್ಯಂತ ತಂದೆ ತಾಯಿಗೆ ಮತ್ತು ಮನೆಗೆ ಹೊರೆಯಾಗಿರುತ್ತಾರೆ. ಎಲ್ಲಾ ರೀತಿಯಿಂದ ತೊಂದರೆಗೊಳಗಾಗಿರುವವರಿಗೆ ಕೇವಲ 400/–ರೂ.ಗಳನ್ನು ಕೊಡುವುದಕ್ಕಿಂತ ಹೆಚ್ಚಾಗಿ ಅವರಿಗೆ income limit ಹಾಕಿರುವುದು ಸರಿಯಿಲ್ಲ. ಅವರನ್ನು ಯಾರೂ ಸಹ ನೋಡಿಕೊಳ್ಳುವುದಿಲ್ಲ, ಅವರನ್ನು ಎಲ್ಲರೂ ಸಹ ಕೈಬಿಟ್ಟಿರುತ್ತಾರೆ. ಈಗಿರುವ income limit ಅನ್ನು ಕಿತ್ತು ಹಾಕಿ, ಅವರಿಗೆ ಮಾನವೀಯತೆಯ ದೃಷ್ಟಿಯಿಂದ ಪಿಂಚಣಿ ಕೊಡಬೇಕು. ಮಾನ್ಯ ಸದಾನಂದಗೌಡರು ಕೊಡುಗೆಯಾಗಿ ಇದನ್ನು ಅವರಿಗೆ ಕೊಡತಕ್ಕಂಥ ಉದಾರವಾದ ಮನಸ್ಸನ್ನು ಮಾಡಬೇಕು. ಅವರೆಲ್ಲರೂ ಕೂಡ ಇದರಿಂದಾಗಿ ತಮ್ಮನ್ನು ಕೊಂಡಾಡುತ್ತಾರೆ. ಅಂಗವಿಕಲರಿಗೆ ಸಂಬಂಧಪಟ್ಟ ಸಮಾರಂಭವೊಂದರಲ್ಲಿ ತಾವು ಮಾತನಾಡಿದ್ದನ್ನು ನಾನು ಟಿ.ವಿ.ಯಲಿ ನೋಡಿದೆ. ಕೇಳಿದೆ. ನನಗೆ ನಿಜವಾಗಿಯೂ ಕೂಡ, ಈ ಬಗ್ಗೆ ಆಗಲೇ ತಮಗೆ ಫೋನ್ ಮಾಡಿ ಹೇಳೋಣ ಅನಿಸಿತ್ತು.

ಅಧ್ಯಕ್ಷರು: ಆಯಿತು, ಮಾನ್ಯ ಮುಖ್ಯಮಂತ್ರಿಗಳೂ ಉತ್ತರ ಹೇಳಿ.

ಶ್ರೀ ಟಿ. ಬಿ. ಜಯಚಂದ್ರ: ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬಹಳ ಆವೇಶದಿಂದ, ಬಹಳ ಸಂತೋಷದಿಂದ, ಉದ್ವೇಗದಿಂದ ಮಾತನಾಡಿ ಅಂಗವಿಕಲರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ. ಅದಕ್ಕಾಗಿಯೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಬಹುಶಃ ಇದೊಂದು ಒಳ್ಳೆಯ ತೀರ್ಮಾನವಾಗುತ್ತದೆ. ನಾವು ಏನು ಕೆಲಸ ಮಾಡದಿದ್ದರೂ

ಪರವಾಗಿಲ್ಲ. ಇಂತಹ ಒಳ್ಳೆಯ ಕೆಲಸವೊಂದನ್ನು ಮಾಡಿದರೆ, ಅದು ಒಳ್ಳೆಯದಾಗುತ್ತದೆ. ಅವರಿಂದ ಒಳ್ಳೆಯ ಆಶೀರ್ವಾದ ನಿಮಗೆ ಸಿಗುತ್ತದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆಯಗಿದೆ. ಕಳೆದ ಫೆಬ್ರವರಿಯಿಂದ ಅನರ್ಹರಿಗೆಲ್ಲಾ ಸಿಕ್ಕಿ ಜಾಸ್ತಿಯಾಗಿದೆ, ವಯಸ್ಸಾಗಿರುವವರಿಗಿಂತ ವಯಸ್ಸಾಗದಿರುವವರೆಲ್ಲಾ ತೆಗೆದುಕೊಂಡಿದ್ದಾರೆ, ಸಂಧ್ಯಾ ಸುರಕ್ಷಾ ವ್ಯಾಪ್ತಿಗೆ ಬಂದಿರುವವರೆಲ್ಲಾ ತೆಗೆದುಕೊಂಡಿದ್ದಾರೆ, ಅಂವಿಕಲಾಗದಿರುವವರೆಲ್ಲಾ ತೆಗೆದುಕೊಂಡಿದ್ದಾರೆ ಎಂದು ಎಲ್ಲಾ ಕಡೆ ತಪಾಸಣೆ ಮಾಡಿದ್ದಾರೆ. ಮಾಡಲಿ ನಮ್ಮದೇನು ತಕರಾರು ಇಲ್ಲ, ಅರ್ಹರಿಗೆ ಸಿಗಬೇಕು, ಅದರ ಬಗ್ಗೆ ಎರಡನೆ ಮಾತಿಲ್ಲ. ಈಗಾಗಲೇ ನಮ್ಮ ಉಪನಾಯಕರು ಪ್ರಸ್ತಾಪ ಮಾಡಿದಂತೆ, ಈಗ ಅವರ ವಾರ್ಷಿಕ ಆದಾಯ ರೂ. 11,000 ಹೆಚ್ಚಿಸಿದ್ದರೂ ಕೂಡ, ರೂ. 6,000 ಇಟ್ಟುಕೊಂಡು ಮಾಡಿದ್ದಾರೆಂಬುದು ಒಂದು. ಎರಡನೆಯದಾಗಿ ನಮ್ಮ ಬಿ. ಸಿ. ಪಾಟೀಲ್ ರವರು ಅಂಕಿ ಅಂಶಗಳನ್ನು ಕೊಡುತ್ತಾರೆ, ನಿಮಗೆ ಬಹಳ ಆಶ್ಚರಯವಗುತ್ತದೆ, ಎಷ್ಟೋ ಜನ ಸತ್ತು ಹೋಗಿದ್ದಾರೆಂದು ಒಂದು ವರದಿ ಮಾಡಿದರು. ಆಮೇಲೆ ಶ್ರೀ ಬಿ. ಸಿ. ಪಾಟೀಲ್ ರವರು ಎಲ್ಲರನ್ನು ಕರೆದುಕೊಂಡು ಹೋಗಿ, ನೋಡಿ ಇವರು ಬದುಕಿದ್ದಾರೆಂದು ತೋರಿಸಿದ ಮೇಲೆ ಪುನಃ ಬದುಕಿದ್ದಾರೆಂದು ಕೊಡುತ್ತಾರೆ. ಅಂದರೆ, ಎಷ್ಟರಮಟ್ಟಿಗೆ ಬೇಜವಾಬ್ದಾರಿಯಿಂದ ಅವರು ತಪಾಸಣೆ ಮಾಡಿರಬೇಕು, ಎಲ್ಲಿ ಕುಳಿತು ಮಾಡಿರಬೇಕು. ಹೇಗೆ ಮಾಡಿರಬೇಕು ಎಂಬುದನ್ನು ತಾವು ಗಮನಿಸಬೇಕು. ಕೇಂದ್ರ ಸರ್ಕಾರ ಈ ವರ್ಷದ ಬಜೆಟ್ ಮಂಡನೆಯಲ್ಲಿ ವಯೋಮಿತಿಯನ್ನು 65 ರಿಂದ 60 ವರ್ಷಕ್ಕೆ ಇಳಿಸಿದ್ದಾರೆ, ಆ ಬಗ್ಗೆ ರಾಜ್ಯ ಸರ್ಕಾರದಿಂದ ಈವರೆಗೆ ಆದೇಶ ಹೊರಟಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಈಗ ತಾನೆ ಮೈಸೂರು, ಟಿ. ನರಸೀಪುರ, ನಂಜನಗೂಡು ಸೇರಿದಂತೆ ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವ ತಹಶೀಲ್ದಾರರನ್ನು ಕೇಳಿದೆ, ಇವತ್ತಿನವರೆಗೆ ಆ ಆದೇಶ ಹೊರಟಿಲ್ಲ. 65 ವರ್ಷದಿಂದ old-age pension ಗೆ 60 ವರ್ಷ ಮಾಡಿದ್ದಾರೆ. ಈ old-age pension ನಲ್ಲಿ ಕೇಂದ್ರ ಸರ್ಕಾರದ ಅರ್ಧ ಪಾಲಿದೆ. ರೂ. 400 ನಲ್ಲಿ ರೂ. 200 ಕೇಂದ್ರ ಸರ್ಕಾರದ್ದು, ರಾಜ್ಯ ಸರ್ಕಾರದ್ದು ರೂ. 200 ಇದೆ, ಅಂಗವಿಕಲರಲ್ಲೂ ಇದೇ ರೀತಿ ಇದೆ. ಅವರು ವಯೋಮಿತಿಯನ್ನು ಕಡಿಮೆ ಮಾಡಿರುವುದರಿಂದ 60 ವರ್ಷವಾದವರಿಗೆ ಸಿಗುವುದಿಲ್ಲ. 65 ವರ್ಷ ಇರುವವರಿಗೆ ಮಾತ್ರವೆಂದು ಲೆಕ್ಕ ಹಾಕಿದರೆ 60 ವರ್ಷ ತುಂಬಿದವರಿಗೂ old-age pension ಕೊಡಬೇಕೆನ್ನುವುದಾಗಿದೆ. ಈ ತಪಾಸಣೆ ಮಾಡುತ್ತೇವೆಂದು

ಫೆಬ್ರವರಿಯಿಂದ ಈವರೆಗೆ ಅವರಿಗೆ ಹಣ ಕೊಟ್ಟಿಲ್ಲ, from February till today ಅವರಿಗೆ pension ಕೊಟ್ಟಿಲ್ಲ, ಈಗ almost ಒಂದು ವರ್ಷವಾಗಿದೆ. ಆಮೇಲೆ ನವೆಂಬರ್, ಡಿಸೆಂಬರ್, ಜನವರಿಯಲ್ಲಿ ತಹಶೀಲ್ದಾರರೇನು ಸಂಧ್ಯಾ ಸುರಕ್ಷಾ old-age pension ಅಂಗವಿಕಲರದ್ದು ವಿಧವಾ ಮಾಸಾಶನ ಮಂಜೂರು ಮಾಡಿ ಟ್ರೆಜರಿಗೆ ಕಳುಹಿಸಿದ್ದರು, ಅವೆಲ್ಲಾ ಅಲ್ಲೇ ನಿಂತು ಹೋಗಿವೆ, because by that time ಇವರಿಗೆಲ್ಲಾ ಕೊಡಬೇಡಿ ಎಂದು ಆದೇಶವಾಗಿದೆ, ಅವೆಲ್ಲಾ ಹಾಗೆ ನಿಂತುಕೊಂಡಿವೆ. Almost since one year ಇವರಿಗೆ pension ಸಿಕ್ಕಿಲ್ಲ. ಈಗ ಬರಗಾಲ ಬೇರೆ, ಬೆಳೆ ಬಂದಿಲ್ಲ, ಇದು ಸಿಗದಿದ್ದರೆ ಅವರು ಹೇಗೆ ಬದುಕಬೇಕು? ಕೂಲಿ ಕೆಲಸವೂ ಸಿಗುವುದಿಲ್ಲ, ಅವರಿಗೆ ಉದ್ಯೋಗವೂ ಸಿಗುವುದಿಲ್ಲ. ಕೊಡುವ ರೂ. 400 pension ನಲ್ಲಿ ಅವರಿಗೆ ಕಾಯಿಲೆ ಬಂದರೆ, ಈ ಹಣವನ್ನೇ ತೆಗೆದುಕೊಂಡು ಅವರು ಔಷಧಿ ತೆಗೆದುಕೊಳ್ಳಬೇಕು. ಈ ಹಣವನ್ನು ತಿಂಗಳೂ ತಿಂಗಳಿಗೆ ಕೊಡದಿದ್ದರೆ ಅವರು ಎಲ್ಲಿ ಹೋಗಬೇಕು? ಆದುದರಿಂದ, ಸರ್ಕಾರಕ್ಕೆ ಈ ಕೂಡಲೇ ಒತ್ತಾಯ ಮಾಡುವುದೇನೆಂದರೆ, ಯಾವ ತಿಂಗಳಿನಿಂದ ಇಲ್ಲಿಯವರೆಗೆ ಹಣವನ್ನು ಕೊಟ್ಟಿಲ್ಲ, ಅಷ್ಟೂ ಬಾಕಿಯನ್ನು ಒಂದೇ ಸಾರಿ ಕೂಡಲೇ ಚುಕ್ತ ಮಾಡಬೇಕು. ಎಲ್ಲೆಲ್ಲಿ ಪೂರ್ಣ ನಿಂತುಹೋಗಿದೆ, ಅದನ್ನು ಕೊಡುವ ಕೆಲಸವಾಗಬೇಕು ಮತ್ತು 60 ವರ್ಷ ತುಂಬಿದವರಿಗೂ ಕೊಡಬೇಕೆಂದಿದೆ, ಅದನ್ನು ಕೂಡಲೇ ಮಾಡಬೇಕು. ಭಾಗ್ಯಲಕ್ಷ್ಮಿ ಯೋಜನೆ ಎಂದು ಯಡಿಯೂರಪ್ಪನವರು ಮಾಡಿದರು, ಅದಕ್ಕೆ ಏನು ಮಾಡಿದ್ದೀರೆಂದರೆ, permanent ಬಿಪಿಎಲ್ ಕಾರ್ಡ್ ಇರಬೇಕೆಂದು ಮಾಡಿದ್ದೀರಿ, ಬಹಳ ಜನಕ್ಕೆ ಬಿಪಿಎಲ್ ಕಾರ್ಡ್ ಇಲ್ಲ. ಶಾಶ್ವತವಾಗಿ ಬಿಪಿಎಲ್ ಕಾರ್ಡ್ ಇಲ್ಲದಿರುವವರಿಗೆ ಬಾಂಡುಗಳು ಸಿಗುವುದಿಲ್ಲ. ಇದರಿಂದ ಬಡವರಿಗೆ ಹೇಗೆ ಸಹಾಯವಾಗುತ್ತದೆ? ಈ ಸಮಸ್ಯೆ ನಿಮ್ಮ ಕ್ಷೇತ್ರದಲ್ಲೂ ಇದೆ, ಎಲ್ಲರ ಕ್ಷೇತ್ರದಲ್ಲೂ ಇದ್ದಾವೆ. ಆದುದರಿಂದ ಕೂಡಲೇ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಇವತ್ತೇ ಎಷ್ಟು arrears ಉಳಿದಿದೆ ಅವೆಲ್ಲವನ್ನೂ ಚುಕ್ತ ಮಾಡತಕ್ಕಂಥ ಕೆಲಸವನ್ನು ಮಾಡಬೇಕು ಮತ್ತು ಮುಂದಿನ ತಿಂಗಳಿನಿಂದ ಪ್ರತಿ ತಿಂಗಳೂ ಅವರಿಗೆ ಸಿಗುವಂಥ ವ್ಯವಸ್ಥೆಯಾಗಬೇಕು ಹಾಗೂ 60 ವರ್ಷ ತುಂಬಿದ ವೃದ್ಧರಿಗೆ pension ಕೊಡುವುದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ, ಇದರಲ್ಲಿ ಸರ್ಕಾರ ಮೀನ ಮೇಷ ಎಣಿಸುವ ಕೆಲಸ ಮಾಡಬಾರದು ಪಾಪ ವಯಸ್ಸಾದ ಈ ಬಡವರ್ಯಾರಿದ್ದಾರೆ, ಅಂಗವಿಕಲರಿದ್ದಾರೆ, ವಿಧವೆಯರಿದ್ದಾರೆ ಅವರ ನೆರವಿಗೆ ಮತ್ತು ರಕ್ಷಣೆಗೆ ಬರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ: ಇದು ಇಡೀ ರಾಜ್ಯಾದ್ಯಂತ ಇರುವ ಸಮಸ್ಯೆಯಾಗಿದೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಅಬ್ಸರ್ವ್ ಮಾಡುತ್ತಿದ್ದೇನೆ, ನಮ್ಮಲ್ಲಿ ಶೂನ್ಯವೇಳೆ, ಗಮನಸೆಳೆಯುವ ಸೂಚನೆ, ರೂಲ್ 69 ಇದ್ಯಾವುದಕ್ಕೂ ವ್ಯತ್ಯಾಸವೇ ಇಲ್ಲವಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಕೆಲವು ಮುಖ್ಯವಾದ ವಿಷಯವಿರುವಾಗ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಕೆಲವಕ್ಕೆ ರೂಲ್ಸ್ ಅನ್ನು ರಿಲ್ಯಾಕ್ಸ್ ಮಾಡಬಹುದು ಅವರಿಗೆ inherent powers ಇದೆ, ರಿಲ್ಯಾಕ್ಸ್ ಮಾಡಬಹುದು, ಇಂಥ ವಿಚಾರಗಳಿಗೆ ರೂಲ್ಸ್ ರಿಲ್ಯಾಕ್ಸ್ ಮಾಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ನಾನು ಹೇಳುವುದಿಷ್ಟೆ, ಅವರವರ ಕ್ಷೇತ್ರದಲ್ಲಿ ಸಮಸ್ಯೆಗಳೇನಿದ್ದಾವೆ, ಆ ಸಮಸ್ಯೆಗೆ ಉತ್ತರ ಕೊಟ್ಟರೆ ಸಾಕು, if anybody wants some clarifications, clarifications ಕೇಳಿ. ಮತ್ತೆ ನೀವು ಡಿಬೇಟ್‌ಗೆ ಅವಕಾಶ ಮಾಡಿಕೊಟ್ಟಿರಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ: ಮಾನ್ಯ ಕಾನೂನು ಸಚಿವರೆ, ಅಲ್ಲಿ ಬಡವರು ಸಾಯುತ್ತಿದ್ದರೆ, ಇಲ್ಲಿ ಕಾನೂನು ಹೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ: It is a burning issue today. ಜನರು, ಎಂಎಲ್‌ಎ ಗಳ ಹತ್ತಿರ ನಮಗೆ ಬಂದಿಲ್ಲ ಕೊಡಿಸಿ ಎಂದು ಹೋಗಿ ಕೇಳುತ್ತಾರೆ, ಏನು ಉತ್ತರ ಕೊಡಬೇಕು ಹೇಳಿ?

ಶ್ರೀ ಎಸ್. ಸುರೇಶ್ ಕುಮಾರ್: ಬಹಳ ಗಂಭೀರವಾದ ಒಂದು ಚರ್ಚೆಯ ವಿಷಯವಿರುವುದರಿಂದ, you convert it into half-an-hour discussion.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮೊದಲು ಉತ್ತರ ಕೊಟ್ಟ ಮೇಲೆ ಏನಾದರು ಸ್ಪಷ್ಟೀಕರಣವಿದ್ದರೆ ಕೇಳಲಿ.

(ಗೊಂದಲ)

ಶ್ರೀ ಬಿ. ಸಿ. ಪಾಟೀಲ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ನನ್ನ ಕ್ಷೇತ್ರದಲ್ಲಿ 7,790 ರದ್ದಾಯಿತು. ಇವನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಅಂಗನವಾಡಿ ಟೀಚರ್ಸ್‌ಗೆ ಕೊಟ್ಟರು. ಬದುಕಿರುವವರನ್ನು

ಸತ್ತಿದ್ದಾರೆಂದು ತಹಶೀಲ್ದಾರರು ಬರಹದಲ್ಲಿ ಕೊಟ್ಟಿದ್ದಾರೆ. ಯಾವಾಗ ನನ್ನ ಮನೆಗೆ 5–20 ಜನ, ಬದುಕಿದಂಥವರವರು ಬಂದು, ನಮ್ಮನ್ನು ಸತ್ತಿದ್ದಾರೆಂದು ರದ್ದು ಮಾಡಿದ್ದಾರೆಂದು ಬಂದರು, ಅವರನ್ನು ತಹಶೀಲ್ದಾರ್ ಹತ್ತಿರ ಕರೆದುಕೊಂಡುಹೋಗಿ, ನೀವು ಇಷ್ಟು ದಿವಸದಲ್ಲಿ ಇದ್ನನು ಸರಿ ಮಾಡದಿದ್ದರೆ ನಾವು ಧರಣಿ ಮಾಡುತ್ತೇವೆಂದಾಗ, ಈ ಸತ್ತಂಥ ಜನರನ್ನು ಪುನಃ ನಾವು ಪರಿಷ್ಕರಣೆ ಮಾಡಿದೆವು, ಪರಿಷ್ಕರಣೆ ಮಾಡಿದ ಮೇಲೆ ಬದುಕಿದ್ದಾರೆಂದು ತಿಳಿದು ಬಂದಿದೆ. ಅದಕ್ಕೆ 120 ಜನರಿಗೆ ಮಂಜೂರು ಮಾಡಿದ್ದೇವೆಂದು ತಹಶೀಲ್ದಾರರು ದಿನಾಂಕ 5–11–11 ರಂದು ಹೇಳಿದರು. ಮತ್ತೆ ಮರುದಿವಸ 132 ಜನಕ್ಕೆ ಮಾಡಿದರು, ಹೀಗೆ ಬದುಕಿರುವವರನ್ನೂ ಕೂಡ ಸಾಯಿಸಿದ್ರು. ಅಂದರೆ, ಇಷ್ಟು ಬೇಜವಾಬ್ದಾರಿಯಾಗಿ ರೆವಿನ್ಯೂ ಇಲಾಖೆಯವರು ನಡೆದುಕೊಂಡಿದ್ದಾರೆ. ಅಂಗನವಾಡಿ ಟೀಚರ್ಸ್ ಕೊಟ್ಟಿರುವುದನ್ನು ಸರಿ ಇದೆಯೋ ಇಲ್ಲವೋ ಎಂದು ಪರಿಶೀಲನೆ ಮಾಡುವ ವಿವೇಚನೆ ನಿಮಗೆ ಇಲ್ಲವೆ ಎಂದು ತಹಶೀಲ್ದಾರರನ್ನು ಕೇಳಿದರೆ, ಇಲ್ಲವೆಂದು ಹೇಳುತ್ತಾರೆ. ಇವತ್ತು 10–12 ತಿಂಗಳಿನಿಂದ ಹಣ ಬಂದಿಲ್ಲ. ನಮ್ಮ ಕಡೆ ಜನರು ಏನು ತಿಳಿದುಕೊಂಡಿರುತ್ತಾರೆಂದರೆ, ಪಗಾರ ಬರುತ್ತದೆಂದು ಅಜ್ಜ–ಅಜ್ಜಿಯವರು ಸಾಲಸೋಲ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು: ಅದನ್ನು ಪ್ರಸ್ತಾಪ ಮಾಡಿದ್ದಾರೆ, ಬೇರೆ ಏನಾದರೂ ಇದ್ದರೆ ಹೇಳಿ.

ಶ್ರೀ ಬಿ. ಸಿ. ಪಾಟೀಲ್: ದಯವಿಟ್ಟು ಮಾನ್ಯ ಅಧ್ಯಕ್ಷರೆ ನಾನು ಕೇಳುವುದು ಇಷ್ಟೆ. ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಿಮಗೆ ಯಾವಗಲೂ ತೊಂದರೆ ಕೊಡುವುದಿಲ್ಲ. ನಾನು ಕಳೆದ ತಿಂಗಳು 14ನೇ ತಾರೀಖಿನಂದು 14 ಘಂಟೆಗಳ ಕಾಲ ಧರಣಿ ಕುಳಿತುಕೊಂಡೆ. ಬೆಳಿಗ್ಗೆ 10 ಘಂಟೆಯಿಂದ ರಾತ್ರಿ 1.00 ಘಂಟೆಯವರೆಗೆ ಧರಣಿ ಮಾಡಿದಾಗ Deputy Commissioner ಬಂದರು. ಈ ಪರಿಷ್ಕರಣೆಯಾದ ನಂತರ 2727 ಜನಕ್ಕೆ ಮಂಜೂರಾತಿ ಕೊಡುತ್ತೇವೆ. ಇದು ತಪ್ಪಾಗಿದೆಯೆಂದು ಹೇಳಿದರು. ಅಂದರೆ 11 ತಿಂಗಳಿಂದ ಅವರಿಗೆ ಹಣ ಬಂದಿಲ್ಲ. ಹೊಸದಾಗಿ ಯಾವ ಅರ್ಜಿಗಳನ್ನು ಕೂಡ ಇವರು ತೆಗೆದುಕೊಳ್ಳುತ್ತಿಲ್ಲ. ಆ ಮೇಲೆ ಇನ್ನೊಂದು ಮಾಡಿದ್ದಾರೆ ವೃದ್ಧಾಪ್ಯ ವೇತನ ಕೊಡುವಂತಹ ಸಂದರ್ಭದಲ್ಲಿ ಅವರಿಗೆ ಕೊಟ್ಟಂತ ಆದೇಶದಲ್ಲಿ ಮರಣದವರೆಗೆ ಎಂದು ಕೊಟ್ಟರು ಟ್ರೆಜರಿಗೆ ಕಳುಹಿಸಿರುವುದರಲ್ಲಿ ಐದು ವರ್ಷ ಎಂದು time ಹಾಕಿ ಕೊಟ್ಟಿದ್ದಾರೆ. ಈಗ ಮುದುಕರು ಮತ್ತೆ ಯುವಕರಾಗುವುದಕ್ಕೆ ಸಾಧ್ಯತೆ ಇದೆಯೇ? ವಿಧವೆಯರ ಬಗ್ಗೆ ಹೇಳಬೇಕೆಂದರೆ, ಬಹುಶಃ ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳು ಮತ್ತೆ ಮದುವೆಯಾಗುವುದು ಬಹಳ ಕಷ್ಟ. ಒಂದು ಸಾರಿ ವಿಧವೆಯಾದವರು. ವಿಧವೆಯರಿಗೂ ಕೂಡ ಮರಣದವರೆಗೆ

ಎಂದು ಕೊಟ್ಟರು ಮತ್ತೆ ಟ್ರೆಜರಿಗೆ ಕಳುಹಿಸಿದ ಆದೇಶದಲ್ಲಿ ಐದು ವರ್ಷ ಎಂದು ಹಾಕಿ ಕೊಟ್ಟು ಇವತ್ತು ಅವರೆಲ್ಲರೂ ಬೀದಿಗೆ ಬಂದು ನಿಂತುಕೊಂಡಿದ್ದಾರೆ. ಇವತ್ತು ಪ್ರತಿ ದಿನ ಬೆಳಿಗ್ಗೆ 50 ರಿಂದ 100 ಜನ ನಮ್ಮ ಮನೆಗಳ ಮುಂದೆ ಬಂದು ನಿಂತುಕೊಳ್ಳುತ್ತಾರೆ. ಇದು ರೆವಿನ್ಯೂ ಇಲಾಖೆಯವರ ನಿರ್ಲಕ್ಷ್ಯತನದಿಂದ ಆಗುತ್ತಿದೆ. ಇಷ್ಟೊಂದು ಬೇಜಾವಾಬ್ದಾರಿತನದಿಂದ ಮಾಡಿರುವಂತಹ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ಕೂಡ ಜರುಗಿಸುತ್ತಿಲ್ಲ ಮತ್ತು ಹೊಸದಾಗಿ ಅರ್ಜಿಗಳನ್ನು ತೆಗೆದುಕೊಂಡು, ವಿಧವೆಯರು ಯಾರಿದ್ದಾರೆ, ವಯೋವೃದ್ಧರು ಯರಿದ್ದಾರೆ ಅವರಿಗೆ ತಕ್ಷಣ ಮಂಜೂರಾತಿ ಮಾಡುವುದಕ್ಕೆ ಮತ್ತು ಅರ್ಜಿಗಳನ್ನು ಪಡೆಯುವುದಕ್ಕೆ ಸರ್ಕಾರ ಆದೇಶ ಕೊಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಂಡು, ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಈಗೇನು cancel ಆಗಿದೆ ಅವರ ಅರಿಯರ್ಸ್ ಅಷ್ಟನ್ನು 10 ತಿಂಗಳಾಗಿರಬಹುದು 12 ತಿಂಗಳುಗಳಾಗಿರ ಬಹುದು ಅಷ್ಟು arrears ಅನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ನಮ್ಮ OAP ಇರಬಹುದು PHP ಇರಬಹುದು ಮತ್ತು ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಇರಬಹುದು ಇದು ಒಂದು ಕ್ಷೇತ್ರದಲ್ಲಿ ಅಲ್ಲ 224 ಕ್ಷೇತ್ರಗಳಲ್ಲೂ ಇವತ್ತು ಆಡಳಿತ ಪಕ್ಷದಲ್ಲಿ ಇರುವವರು ಪಾಪ ಯಾರೂ ಮಾತನಾಡುತ್ತಿಲ್ಲ. 224 ಕ್ಷೇತ್ರಗಳಲ್ಲೂ ಇವತ್ತು ಜನಸಾಮಾನ್ಯರು, ಪಾಪ ಬಡವರು ಇದ್ದಾರೆಲ್ಲಾ ಇವತ್ತು ಬರಗಾಲ ಇದೆ. ಸುಮಾರು 100 ಕ್ಷೇತ್ರಗಳನ್ನು ಬರಪೀಡಿತ ಪ್ರದೇಶಗಳೆಂದು declare ಮಾಡಿದ್ದಾರೆ. ಇವತ್ತು ಏನಾಗಿದೆಯೆಂದರೆ ಕೆಲವುರ ಊಟಕ್ಕೆ ಇಲ್ಲದಿರುವವರು ತಹಶೀಲ್ದಾರ್ ಕಛೇರಿ, ನಾಡ ಕಛೇರಿ ನಮ್ಮ ಹತ್ತಿರ ತಿರುಗುವುದಾಗಿದೆ. ಏನಾದರೂ ಮಾಡಿ. ಕೇಂದ್ರ ಸರ್ಕಾರದಿಂದ 50% ಹಣ ಬಂದಿದೆ ಎಂದು ಹೆಳುತ್ತಾರೆ. ಹಣ ಏನಾದರೂ ಬೇರೆ ಕಡೆ ವಿನಿಯೋಗ ಮಾಡಿ, ರಾಜ್ಯ ಸರ್ಕಾರದಲ್ಲಿ ಹಣ ಇಲ್ಲದೆ ಏನಾದರೂ ನಿಲ್ಲಿಸಿಕೊಂಡಿದ್ದಾರಾ? ಯಾವ ಕಾರಣಕ್ಕೋಸ್ಕರ ಒಂದು ವರ್ಷದಿಂದ ನಿಲ್ಲಿಸಿದ್ದಾರೆ? ಆಮೇಲೆ ಕೆಲವು ಕಡೆ ತಹಶೀಲ್ದಾರರು ಮತ್ತು Food inspector ಗಳು ಸರ್ವೇ ಮಾಡುತ್ತಿದ್ದಾರೆ. ಸರ್ವೆ ಮಾಡುವಂತಹ ಸಂದರ್ಭದಲ್ಲಿ ಏನು ಮಾಡಿದ್ದಾರೆಂದರೆ, ಮಾನ್ಯ ಸಭಾಧ್ಯಕ್ಷರೆ ಒಂದು ಮನೆಯಲ್ಲಿ ಮೂರರಿಂದ ನಾಲ್ಕು ಕುಟುಂಬಗಳಿರುತ್ತವೆ. ಒಂದೇ BPL ಕಾರ್ಡ್ ಅನ್ನು ಕಂಪ್ಯೂಟರ್‌ಗೆ ಹಾಕಿ. ಒಂದೊಂದು ತಾಲ್ಲೂಕಿನಲ್ಲಿ . . . .

ಅಧ್ಯಕ್ಷರು: ಈಗ BPL card ಇಲ್ಲ. ಸಂಧ್ಯಾ ಸುರಕ್ಷಾ ಯೋಜನೆ ಇರುವುದು.

ಶ್ರೀ ಹೆಚ್. ಡಿ. ರೇವಣ್ಣ: City ಗಳಲ್ಲಿ ಸಂಪೂರ್ಣವಾಗಿ ಅದರ ಪ್ರಕಾರ ನೀವು 50% Old age pension ಮತ್ತು widow pension ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಎಲ್ಲಾ village accountant ಗಳಿದ್ದಾರೆ. ತಹಶೀಲ್ದಾರರು ಇದ್ದಾರೆ, ರೆವಿನ್ಯೂ inspector ಗಳಿದ್ದಾರೆ. ಅವರಿಗೆ ಮಾಡುವುದಕ್ಕೆ ಏನು ಸ್ವಾಮಿ? ಇದೊಂದು ಕೆಲಸ ಮಾಡುವುದಕ್ಕೆ ಜಿಲ್ಲಾಧಿಕಾರಿಗಳು ಮತ್ತು AC ಗಳಿಗೆ ಜವಾಬ್ದಾರಿ ಹಾಕಿ 15 ದಿವಸಗಳಲ್ಲಿ ಒಂದು ವರ್ಷದಿಂದ ಏನು ಬಾಕಿ ಬರಬೇಕಾಗಿದೆ ಅಷ್ಟನ್ನು ಕೊಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ನನ್ನಲ್ಲಿ ಒಂದಿಷ್ಟು ಮಾಹಿತಿಗಳಿದೆ. ಆ ಮಾಹಿತಿಗಳನ್ನು ಹೇಳುತ್ತೇನೆ. ಆದರೆ ಒಂದು ಭಾರಿ ಜಬರ್ದಸ್ತ್ ಆದ argument ಗಳ ಆ ಭಾಗದಿಂದ ಆಯಿತು. ಆದರೆ ನೀವು ಕೊಟ್ಟಂತಹ 100 ರೂ.ಗಳನ್ನು 200ಕ್ಕೆ ಏರಿಸಿ 400ಕ್ಕೆ ಏರಿಸಿದ್ಯಾರು ಎಂದು ಹೇಳುವಂತಹದ್ದನ್ನು ಕೂಡ ಮಾತನಾಡುವ ಸಂದರ್ಭದಲ್ಲಿ ತಾವೆಲ್ಲಾ ಚಿಂತನೆ ಮಾಡಬೇಕಾದಂತ ಅವಶ್ಯಕತೆಯಿದೆ. ನಮ್ಮ ಸರ್ಕಾರ ಬಂದ ಮೇಲೆ ಅದನ್ನು 400 ರೂ.ಗಳನ್ನು ಮಾಡಿದೆ ಎನ್ನುವುದನ್ನು ನೀವೆಲ್ಲಾ ಒಪ್ಪಿಕೊಳ್ಳುತ್ತೀರಿ. It is a fact.

ಅಧ್ಯಕ್ಷರು: ಉತ್ತರ ಹೇಳುವುದಕ್ಕೆ ಬಿಡಿ. ಎಲ್ಲಾ ಎದ್ದು ನಿಂತರೆ ಹೇಗೆ? ರುದ್ದೇಶ್ ಗೌಡರೇ, ನೀವು ಪ್ರತಿಯೊಂದಕ್ಕೂ ಎದ್ದು ನಿಲ್ಲುತ್ತೀರಿ.

ಶ್ರೀ ಡಿ. ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಲ್ಲಿ ಈ ರೀತಿಯ ಬೋಗಸ್ ಪಲಾನುಭವಿಗಳು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕಂಡುಬಂದ ಕಾರಣದಿಂದ ಇದನ್ನು verification ಮಾಡಬೇಕೆಂಬ ನಿರ್ಧಾರವನ್ನು ಕಳೆದ ಫೆಬ್ರವರಿಯಲ್ಲಿ ಸರ್ಕಾರ ತೆಗೆದುಕೊಂಡಿದೆ. ಅದರ ಪ್ರಕಾರ ಇಡೀ ರಾಜ್ಯದಲ್ಲಿ ಸುಮಾರು 47,44,936 ಫಲಾನುಭವಿಗಳ ಪೈಕಿ ಈಗಾಗಲೇ 40,89,091 ಫಲಾನುಭವಿಗಳನ್ನು verification ಮಾಡಿದ್ದೇವೆ. ಈಗ ನಾವು 24–5–2011ರಲ್ಲಿ income verification ಅನ್ನು ಹೆಚ್ಚು ಮಾಡುವಂತಹ ಪ್ರಯತ್ನಗಳನ್ನು ಮಾಡಿ ಆರು ಸಾವಿರದ ಆದಾಯ ಮಿತಿಯನ್ನು ನಿರ್ಗತಿಕರ, ವಿಧವಾ ಮಾಸಾಶನ ಮತ್ತು ಅಂಗವಿಕಲರ ಮಾಸಾಶನದಲ್ಲಿ ಅದನ್ನು ಗ್ರಾಮೀಣ ಪ್ರದೇಶಗಳಲ್ಲಿ 12,000 ರೂ.ಗಳಿಗೆ ಮತ್ತು ನಗರ ಪ್ರದೇಶಗಳಲ್ಲಿ 17,000 ರೂ.ಗಳಿಗೆ ಹೆಚ್ಚು ಮಾಡಿ Government Order ಅನ್ನು issue ಮಾಡಿ ಅದರ ಆಧಾರದ ಮೇಲೆ ಮಾಡಿದ್ದೇವೆ. ಮೊನ್ನೆ ದಿನ verification

ಮಾಡುವಂತಹ ಸಂದರ್ಭದಲ್ಲಿ ಅದು income ಎಂದು ಅಲ್ಲ ಬೇರೆ ಎಲ್ಲವನ್ನು ನಾವು ಕಂಡುಕೊಂಡಿದ್ದೇವೆ. ಹಿರೇಕೇರೂರು ಕ್ಷೇತ್ರದ ಶಾಸಕರು ಹೇಳಿದ ರೀತಿಯಲ್ಲಿ ಏನು ವ್ಯತ್ಯಾಸವಾಗಿದೆ ಎಂದು ಹೇಳಿದ್ದಾರೋ ಅದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಮಾಹಿತಿಯನ್ನು ಪಡೆದುಕೊಂಡು ಕೊಡುವುದಕ್ಕೆ ತಯಾರಿದ್ದೇನೆ. ಈಗಾಗಲೇ ನೀವು ಹೇಳಿದ ರೀತಿಯಲ್ಲಿ ಕಳೆದ ಫೆಬ್ರವರಿಯ ನಂತರ ನಿಂತಿದ್ದ ಎಲ್ಲವನ್ನು ಕೂಡ ಅಕ್ಟೋಬರ್–ನವೆಂಬರ್‌ನಲ್ಲಿ payment ಮಾಡುವಂತಹ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಇನ್ನೂ 2–3 ಜಿಲ್ಲೆಗಳಲ್ಲಿ ಸ್ವಲ್ಪ ಇದರ ಪೂರ್ತಿ ತನಿಖೆಗೆ ಬಾಕಿ ಇದೆ. Bangalore Rural ವಿಜಾಪುರ ಮತ್ತು ಕೊಪ್ಪಳದಲ್ಲಿ ಸ್ವಲ್ಪ ಈ verification ಕೊನೆಯ ಹಂತದಲ್ಲಿದೆ ಅದನ್ನು ಮಾಡಿ ಮುಗಿಸುತ್ತೇವೆ. ಈಗಾಗಲೇ ಅವರು ಪ್ರಸ್ತಾಪ ಮಾಡಿದ ಎಲ್ಲಾ ವಿಚಾರಗಳ ಬಗ್ಗೆ ಪರಿಶೀಲನೆ ಮಾಡಿಕೊಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರು

ಶ್ರೀ ಬಿ. ಸಿ. ಪಾಟೀಲ್: ಹೊಸದಾಗಿ ಅರ್ಜಿಗಳನ್ನು ತಗೆದುಕೊಳ್ಳುವುದು.

ಶ್ರೀ ಡಿ. ವಿ. ಸದಾನಂದಗೌಡ: ಹೊಸದಾಗಿ ಅರ್ಜಿಗಳನ್ನು ಸ್ವೀಕಾರ ಮಾಡಿ ಹೊಸ ಅರ್ಜಿಯ ಬಗ್ಗೆ ಅವರನ್ನು beneficiary ಆಗಿ treat ಮಾಡುತ್ತೇವೆ.

ಶ್ರೀ ಬಿ. ಸಿ. ಪಾಟೀಲ್: Verification ಮಾಡಿ ಒಂದು ವರ್ಷವಾಯಿತು.

ಶ್ರೀ ಡಿ. ವಿ. ಸದಾನಂದಗೌಡ: ಈಗ ಅದೆಲ್ಲಾ ಮುಗಿಯಿತು. ಈಗ ಹೊಸ ಅರ್ಜಿಗಳನ್ನು ತೆಗೆದುಕೊಂಡು ಹೊಸ beneficiary ಗಳಿಗೆ ಕೊಡುವಂತದ್ದು ಮತ್ತು ಹಳೆಯ ಅರ್ಜಿಗಳಲ್ಲಿ ಎಲ್ಲಿಯಾದರೂ ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಸಿದ್ದವಿದೆ.

ಶ್ರೀ ಸಿದ್ಧರಾಮಯ್ಯ: ಇದು important.

ಊ) ವಿಷಯ: ಹಾಸನ ಜಿಲ್ಲೆಯ ITI ಸಂಸ್ಥೆಗಳಿಗೆ ಸ್ವಂತ ಕಟ್ಟಡಗಳನ್ನು ಮಂಜೂರು ಮಾಡುವ ಬಗ್ಗೆ:–

ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ): ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಉದಯಪುರ ಹಾಗೂ ಬಾಗೂರು ಮತ್ತು ಹಾಸನ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿಯ ಮೊಸಳೆಹೊಸಹಳ್ಳಿ, ಹೊಳೇನರಸೀಪುರ ತಾಲ್ಲೋಕಿನ ಹರಿಹರಪುರಗಳಲ್ಲಿ 2007–08 ರಲ್ಲಿ ಸರ್ಕಾರಿ ಐ.ಟಿ.ಐ. ತರಬೇತಿ ಸಮಸ್ಥೆಗಳನ್ನು ಸ್ಥಾಪಿಸಿದ್ದು, ಈ ಸಂಸ್ಥೆಗಳಿಗೆ